

# ಹಬ್ಬದ ಸಂಭ್ರಮಕ್ಕೆ ರೇಷ್ಮೆ ಸೀರೆ

ಹಬ್ಬದ ಸಂಭ್ರಮಕ್ಕೆ ರೇಷ್ಮೆ ಸೀರೆ ಸಾಥಿ ಬೇಕು. ಸೀರೆಗಳ ಮಟ್ಟಿಗೆ ಎವರ್‌ಗ್ರೀನ್ ರಾಣಿಯಂತೆ ಮಿಂಚುವುದು ರೇಷ್ಮೆ ಸೀರೆಗಳೇ. ವೈವಿಧ್ಯಮಯ ವಿನ್ಯಾಸ, ಬಣ್ಣಗಳಲ್ಲಿ ಸೆಳೆಯುವ ರೇಷ್ಮೆ ಸೀರೆ ಶುಭ ಸಮಾರಂಭ, ಹಬ್ಬಹರಿದಿನಗಳಲ್ಲಿ ಮಹಿಳೆಯರು ಧರಿಸುವಂತಹ ಸಾಂಪ್ರದಾಯಿಕ ಉಡುಪು.

■ ಉಮಾ ಅನಂತ್

ಸಾಂಪ್ರದಾಯಿಕತೆಗೆ ಹೆಸರಾಗಿದ್ದ ರೇಷ್ಮೆ ಸೀರೆ ಇದೀಗ ಆಧುನಿಕತೆಗೂ ಒಗ್ಗಿಕೊಂಡಿದೆ. ಫ್ಯಾಷನ್ ಜಗತ್ತಿನಲ್ಲಿ ರೇಷ್ಮೆ ಸೀರೆ 'ಎವರ್‌ಗ್ರೀನ್ ರಾಣಿ'ಯಂತೆ ಮಿಂಚುತ್ತಿದೆ. ದಸರಾ, ದೀಪಾವಳಿ ಹಬ್ಬದ ಸಡಗರದಲ್ಲಿ ರೇಷ್ಮೆ ಸೀರೆಗಳ ಪಾತ್ರ ಬಹಳ ದೊಡ್ಡದೇ. ಹೀಗಾಗಿ ಅಪ್ಪಟ ರೇಷ್ಮೆ ಸೀರೆಗೆ ಎಂದಿಗೂ ಉಡುಪುಗಳಲ್ಲೇ ಅಗ್ರಪಟ್ಟ.

ರೇಷ್ಮೆ ಸೀರೆ ಎಂದಾಕ್ಷಣ ಥಟ್ಟನೆ ನೆನಪಿಗೆ ಬರುವುದು ಮೈಸೂರು ರೇಷ್ಮೆ. ಇದರ ಜೊತೆಗೆ ಮಹಾರಾಣಿಯಂತೆ ಮೆರೆಯುವ ಕಾಂಜೀವರಂ, ಬನಾರಸ್, ಚಂದೇರಿ, ಬಾಗಲ್ಪುರಿ, ಅಸ್ಸಾಂ ಸಿಲ್ಕ್, ಬೊಮ್ಮಾಯ್, ಮೊಳಕಾಲ್ಮುರು ಸೀರೆಗಳು ವಿನ್ಯಾಸ, ಬಣ್ಣ, ವೈವಿಧ್ಯದಲ್ಲಿ ಪೈಪೋಟಿ ನಡೆಸುತ್ತಿವೆ. ಇವೆಲ್ಲವುಗಳೊಂದಿಗೆ ಚೆನ್ನೈ ಮೂಲದ ಆರ್‌ಎಂಕೆವಿ ಸೀರೆ ಕೂಡ ಮಹಿಳೆಯರನ್ನು ಥಟ್ಟನೆ ಸೆಳೆಯುತ್ತಿದೆ.

ಹಬ್ಬ, ಮದುವೆ, ಗೃಹಪ್ರವೇಶದಂಥ ಶುಭ ಸಮಾರಂಭಗಳಲ್ಲಿ ರೇಷ್ಮೆಸೀರೆಯದೇ ಕಾರುಬಾರು. ಸೀರೆಯಲ್ಲಿ ಇದೀಗ ಹಗುರವಾದ, ಆಕರ್ಷಕ ವಿನ್ಯಾಸದ, ಥರಾವರಿ ಬಣ್ಣಗಳ ಸೀರೆಗಳು ಬಂದಿದ್ದು, ಮಹಿಳೆಯರ ಮನಕದಿಯುತ್ತಿವೆ. ಫ್ಯಾನ್ಸಿ ಸೀರೆಗಳೂ ಆಧುನಿಕ ಮನೋಭಾವದ ಮಹಿಳೆಯರನ್ನು ಸೀರೆ ಉಡುವಂತೆ ಹುರಿದುಂಬಿಸುತ್ತಿವೆ.

ಹೆಣ್ಣು ಮಕ್ಕಳಿಗೆ ತವರೆಂದರೆ ವಿಶೇಷ ವ್ಯಾಮೋಹ. ಅದೇ ರೀತಿ ಸೀರೆಯೂ ತವರಿನೊಂದಿಗೆ ಅನನ್ಯ ನಂಟನ್ನೇ ಹೊಂದಿದೆ. ತಾಯಿ ಕೊಟ್ಟ ಸೀರೆ, ಅಣ್ಣ ಉಡುಗೊರೆ ನೀಡಿದ ಸೀರೆ ಎಂದು ಸೀರೆಯ ತಿಜೋರಿಯಿಂದ ತೆಗೆದು ಆಪ್ತರಿಗೆ ತೋರಿಸಿದಾಗ ಏನೋ ಧನ್ಯತಾ ಭಾವ. ಹಬ್ಬ ಹರಿದಿನಗಳಲ್ಲಿ ತವರುಮನೆಯಿಂದ ಸೀರೆ ಉಡುಗೊರೆ ಬಂದರಂತೂ ಅಲ್ಲಿ ಸಂಭ್ರಮದೊಂದಿಗೆ ಭಾವುಕತೆಯೂ ಸೇರಿಕೊಳ್ಳುತ್ತದೆ.

## ರೇಷ್ಮೆಗೆ ಪರ್ಯಾಯ; ಫಾಕ್ಸ್ ಸಿಲ್ಕ್

ರೇಷ್ಮೆ ಸೀರೆ ಉಡಬೇಕೆಂಬ ಹಂಬಲ ಎಲ್ಲರದ್ದು. ಆದರೆ ಅಪ್ಪಟ ರೇಷ್ಮೆ ಕೈಗೆಟುಕುವಷ್ಟು ಅಗ್ಗವಲ್ಲ. ದುಬಾರಿ ಹಣ ತೆತ್ತು ಒಂದೆರಡು ಬಾರಿ ಉಟ್ಟು ಇಟ್ಟುಕೊಳ್ಳಬೇಕಾದ ರೇಷ್ಮೆ ಸೀರೆಯ ಬದಲಾಗಿ ರೇಷ್ಮೆಯನ್ನೇ ಹೋಲುವ ಇಮಿಟೇಟಿಂಗ್ ರೇಷ್ಮೆ ಸೀರೆ ಇದೀಗ ಮಾರುಕಟ್ಟೆಯಲ್ಲಿ ಹೆಚ್ಚು ಮಹಿಳೆಯರನ್ನು ಸೆಳೆಯುತ್ತಿದೆ. 'ಆರ್ಟ್ ಸಿಲ್ಕ್' ಎಂದು ಕರೆಯಲಾಗುವ ಈ ಬಟ್ಟೆಗೆ 'ಫಾಕ್ಸ್ ಸಿಲ್ಕ್ (faux silk) ಎಂದೂ ಕರೆಯಲಾಗುವುದು. ಸಿಂಥೆಟಿಕ್ ಅಥವಾ ರೆಯಾನ್ ಫ್ಯಾಬ್ರಿಕ್‌ನಿಂದ ಈ ಸೀರೆಯ ವಿನ್ಯಾಸ ಮಾಡಲಾಗುತ್ತದೆ. ಕೃತಕ ರೇಷ್ಮೆಯ ಇನ್ನೊಂದು ವೈವಿಧ್ಯವೆಂದರೆ ಬಿದಿರಿನ ರೇಷ್ಮೆ. ಬಿದಿರಿನ ವಿಸ್ಕೋಸ್‌ನಿಂದ ತಯಾರಿಸಲಾಗುವ ಈ ಸೀರೆ ಕೂಡ ನೈಜ ರೇಷ್ಮೆಯನ್ನೇ ಹೋಲುವುದರಿಂದ ಹಬ್ಬದ ಸಂಭ್ರಮದಲ್ಲಿ ಇದನ್ನು ಉಡಬಹುದು.

## ಜನಪ್ರಿಯವಾದ 'ಆರ್ಟ್ ಸಿಲ್ಕ್'

ರೇಷ್ಮೆ ಸೀರೆಯ ತದ್ರೂಪವಾಗಿರುವ 'ಆರ್ಟ್ ಸಿಲ್ಕ್' ಜನಪ್ರಿಯತೆಯ ಹಾದಿ ಹಿಡಿದಿದೆ. ಅಪ್ಪಟ ರೇಷ್ಮೆ ಸೀರೆಯ ಲುಕ್ ಅನ್ನೇ ಕೊಡುವ ಕೈಗೆಟುಕುವ ದರದಲ್ಲಿ ಆರ್ಟ್ ಸಿಲ್ಕ್ ಸೀರೆ